ವಿಷಯ : ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹಿಂದಿ ಶಿಕ್ಷಕರ ಹುದ್ದೆಗಳ ಭರ್ತಿ

1319 (1797) ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹಿಂದಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕ್ರಮ ತೆಗೆದುಕೊಂಡಿದೆಯೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು.)

ಅ) ತೆಗೆದುಕೊಂಡಿದೆ.

ವಿಷಯ : ಅಲ್ಪ ಸಂಖ್ಯಾತರಿಗಾಗಿ ವಸತಿ ಶಾಲೆಗಳು

1320 (1851)-ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯ ಸರ್ಕಾರವು ಮತೀಯ ಅಲ್ಪಸಂಖ್ಯಾತರಿಗಾಗಿ 5 ವಸತಿ ಶಾಲೆಗಳನ್ನು ಪ್ರಾರಂಭ ಮಾಡಿದೆಯೇ?

ಆ) ಈ ವಸತಿ ಶಾಲೆಗಳನ್ನು ಯಾವ ಯಾವ ಜಿಲ್ಲೆಗಳಲ್ಲಿ ಪ್ರಾರಂಭ ಮಾಡಲಾಗಿದೆ. ಈ ವಸತಿ ಶಾಲೆಗಳನ್ನು ಸರ್ಕಾರವೇ ನಡೆಸುತ್ತಿದೆಯೆ ಅಥವಾ ಬೇರೆ ಬೇರೆ ಸಂಸ್ಥೆಗಳಿಗೆ ಶಾಲೆಗಳನ್ನು ಪ್ರಾರಂಭ ಮಾಡಲು ಸರ್ಕಾರ ಅನುಮತಿ ನೀಡಿದೆಯೇ?

ಇ) ಈ ವಸತಿ ಶಾಲೆಗಳಲ್ಲಿ ಶಿಕ್ಷಕರನ್ನು ನೇಮಿಸಿದ್ದಲ್ಲಿ ಇವರ ಸಂಖ್ಯೆ ಎಷ್ಟು ಮತ್ತು ಈ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್. ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.)

1) ಬೆಂಗಳೂರು ಗ್ರಾಮಾಂತರ ಜಿಲ್ಲೆ - ರಾಮನಗರದಲ್ಲಿ

2) ಮಂಡ್ಯ ಜಿಲ್ಲೆ - ಶ್ರೀ ರಂಗಪಟ್ಟಣ

3) ದಕ್ಷಿಣ ಕನ್ನಡ ಜಿಲ್ಲೆ - ಕೊಟೆಕಾರ ಮಂಗಳೂರು ತಾ:

4) ಬಿಜಾಪುರ ಜಿಲ್ಲೆ - ಬಿಜಾಪುರ ನಗರ

5) ಗುಲ್ಬರ್ಗಾ ಜಿಲ್ಲೆ - ಬುಲ್ಬರ್ಗಾ ನಗರ

ಆ) ಈ ವಸತಿ ಶಾಲೆಗಳನ್ನು ಸರ್ಕಾರ ನಡೆಸುತ್ತಿಲ್ಲ. ಈ ವಸತಿ ಶಾಲೆಗಳನ್ನು ನಡೆಸಲು ಹಜರತ್ ಖ್ವಾಜಾತಗರೀಬ್ ಚಾರಿಟ್‌ಬಲ್ ಟ್ರಸ್ಟ್, ಬೆಂಗಳೂರು, ಈ ಸಂಸ್ಥೆಗೆ ಸರ್ಕಾರ ಅನುಮತಿ ನೀಡಿದೆ

ಇ)ದಕ್ಷಿಣ ಕನ್ನಡ ಜಿಲ್ಲೆಯ ವಸತಿ ಶಾಲೆಗೆ ಮಾತ್ರ 6 ಜನ ಶಿಕ್ಷಕರನ್ನು 8 ಜನ ಶಿಕ್ಷಕೇತರರನ್ನು ನೇಮಿಸಲಾಗಿದೆ. ಇತರೆ ಶಾಲೆಗಳಿಗೂ ಕೂಡ ನೇಮಕಾತಿ ಮಾಡಿದೆ. ಇವು ಅನುಮೋದನೆಯ ವಿವಿಧ ಹಂತಗಳಲ್ಲಿವೆ.

	ತರಗತಿ	ವಿದ್ಯಾರ್ಥಿಗಳು
1) ರಾಮನಗರ		
(ಬೆಂಗಳೂರು ಗ್ರಾಮಾಂತರ	5	39
	5	18
	6	15
2) ಮಂಗಳೂರು (ದಕ್ಷಿಣ ಕನ್ನಡ)	8	41
	9	23
		97
3) ಶ್ರೀರಂಗ ಪಟ್ಟಣ (ಮಂಡ್ಯ ಜಿಲ್ಲೆ)	5	41
	6	22
	8	8
		71 ವಿದ್ಯಾರ್ಥಿಗಳು
4) ಬಿಜಾಪುರ	5	46
	6	47
	8	46
	9	16
155 ವಿದ್ಯಾರ್ಥಿಗಳು		
5) ಗುಲ್ಬರ್ಗಾ	5	50
	8	50
		100 ವಿದ್ಯಾರ್ಥಿಗಳು